ಓ.ಎಸ್. 09/2018

ಡಿ .ಡಬ್ಲ್ಯು: 2

ದಿನಾಂಕ: 14-03-2025

ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.

ಮುಂದುವರೆದ ಪಾಟೀಸವಾಲು: ವಾದಿ ಪರ ಶ್ರೀ ಕೆ ಆರ ಎನ . ವಕೀಲರಿಂದ:-

ದಾನ ಪತ್ರವನ್ನು ಅಡಮಾನ ಇಟ್ಟು ಬ್ಯಾಂಕಿನಿಂದ ಸನ 2014-15 ರಲ್ಲಿ ಸಾಲ ಪಡೆದುಕೊಂಡಿದ್ದೆನು. ಅಡಮಾನ ಸಾಲ ರೂ.10 ಲಕ್ಷ ಮತ್ತು ಓ-ಡಿ ಸಾಲ ರೂ.5 ಲಕ್ಷ ಪಡೆದುಕೊಂಡಿದ್ದೆನು. ಸದರಿ ಸಾಲವನ್ನು ನನ್ನ ವೈಯಕ್ತಿಕ ಸಾಲ ತಿರಿಸಲು ಪಡೆದುಕೊಂಡಿದ್ದೆನು. ಸದರಿ ನಾನು ಜನರಿಂದ ಕೈ ಸಾಲ ಮಾಡಿದ್ದೆನು. ನಾನು ಮೂರ್ನಾಲ್ಕು ಜನರ ಬಳಿಯಿಂದ ಸಾಲ ತೆಗೆದುಕೊಂಡಿದ್ದೆನು. ನಾನು ಮೂರ್ನಾಲ್ಕು ಜನರ ಬಳಿಯಿಂದ ಸಾಲ ಪಡೆದ ವ್ಯಕ್ತಿಗಳ ಹೆಸರು ನನಗೆ ಗೊತ್ತಿಲ್ಲ. ನಾನು ವೈಯುಕ್ತಿಕವಾಗಿ ಪ್ರತಿವಾದ ತಕರಾರು ಪತ್ರ ಸಲ್ಲಿಸಿರುತ್ತೇನೆ. ನನ್ನ ತಕರಾರನಲ್ಲಿ ನನ್ನ ವೈಯುಕ್ತಿಕ ಸಾಲ ತಿರಿಸಲು ಬ್ಯಾಂಕಿನಿಂದ ಸಾಲ ಪಡೆದುಕೊಂಡಿದ್ದೇನೆಂದು ಹೇಳಿ ಬರೆಸಿರುವುದಿಲ್ಲ. ನನಗೆ ಸೇರಿದ 4 ಗುಂಟೆ ಜಾಗವನ್ನು 11ನೇ ಪ್ರತಿವಾದಿಗೆ ಮಾರಾಟ ಮಾಡಿರುತ್ತೇನೆ. ಸದರಿ ಜಾಗವನ್ನು ಮಾರಾಟ ಮಾಡಿರುವ ಬಗ್ಗೆ ಖರಿದಿ ಪತ್ರದಲ್ಲಿ ಯಾವ ಕಾರಣಕ್ಕಾಗಿ ಜಾಗವನ್ನು ಮಾರಾಟ ಮಾಡಿದ್ದೆನೆ ಎಂದು ಬರೆದಿರುವ ಬಗ್ಗೆ ನನಗೆ ಗೊತ್ತಿಲ್ಲ. ನಾನು ಹಾಜರು ಪಡಿಸಿದ ದಾನ ಪತ್ರ ಮತ್ತು ನಕ್ಷೆ ನೋಡಿ ತಿಳಿದುಕೊಂಡಿರುತ್ತೇನೆ. ದಾನ ಪತ್ರದಲ್ಲಿ ಅವಿಭಕ್ತ ಕುಟುಂಬದ ಸಮಾಯಕ ಹಕ್ಕಿನ ಆಸ್ತಿ ಎಂದು ಬರೆಯಲಾಗಿದೆ ಎಂದರೆ

ಸರಿ, ಸಾಕ್ಷಿ ಮುಂದುವರೆದು ಅದು ದಾನ ಪತ್ರ ಬರೆಯುವಾಗ ವಕೀಲರು ತಪ್ಪು ಬರೆದಿದ್ದಾರೆ ಎಂದು ನುಡಿಯುತ್ತಾರೆ. ಸಾಕ್ಷಿಗೆ ಪ್ರತಿವಾದಿಗಳು ಸಲ್ಲಿಸಿದ ಪ್ರತಿವಾದ ಪತ್ರಗಳನ್ನು ನೋಡಿ ನಾನು ಪ್ರತ್ಯೇಕ ಪ್ರತಿವಾದ ಪತ್ರ ಸಲ್ಲಿಸಿಲ್ಲ ಎಂದು ನುಡಿಯುತ್ತಾರೆ. ನನ್ನ ಮುಖ್ಯ ವಿಚಾರಣ ಪ್ರಮಾಣ ಪತ್ರದಲ್ಲಿ ದಾನ ಪತ್ರದಲ್ಲಿ ಅವಿಭಕ್ತ ಕುಟುಂಬ ಸಮಾಯಕ ಹಕ್ಕಿನ ಎಂದು ತಪ್ಪಾಗಿ ಬರೆಯಲಾಗಿದೆ ಎಂದು ಹೇಳಿ ಬರೆಸಿರುತ್ತೇನೆ. ನಾನು ನನ್ನ ಪ್ರಮಾಣ ಪತ್ರದಲ್ಲಿ ಮೇಲಿನಂತೆ ಹೇಳಿ ಬರೆಸಿದ್ದೆನೆ ಎಂದು ಸುಳ್ಳು ನುಡಿಯತ್ತಿದೆನೆ ಎಂದರೆ ಸರಿಯಲ್ಲ. ನನ್ನ ಮುಖ್ಯ ವಿಚಾರಣ ಪ್ರಮಾಣ ಪತ್ರವನ್ನು ನೋಡಿ ಅದನ್ನು ಬರೆಯದೆ ಇದ್ದರೂ ಸಹ ಅದನ್ನು ಬರೆಯಲಾಗಿದೆ ಎಂದರೇ ಸರಿಯಲ್ಲ. ನಾನು ಈ ದಿನದವರೆಗೆ ಬ್ಯಾಂಕಿನಿಂದ ಪಡೆದ ಸಾಲಕ್ಕೆ ಪ್ರತಿ ತಿಂಗಳು ರೂ.10,000/- ಕಟುಟ್ಟತಿದ್ದೇನೆ. ಇನ್ನು ಸಾಲ ರೂ.7,00,000/- ಬಾಕಿ ಇರುತ್ತದೆ. ನಾನು ಸಾಲ ತಿರಿಸುತ್ತಿದ್ದ ಬಗ್ಗೆ ದಾಖಲೆಗಳು ಇರುತ್ತವೆ. ಸದರಿ ದಾಖಲೆಗಳನ್ನು ಹಾಜರುಪಡಿಸಲು ನನಗೆ ಯಾವುದೆ ತೊಂದರೆ ಇರುವುದಿಲ್ಲ. ಬ್ಯಾಂಕಿನವರು ಇದೇ ನ್ಯಾಯಾಲಯದಲ್ಲಿ ಅಮಲ ಜಾರಿ ಪ್ರಕರಣ ದಾಖಲಿಸಿದ್ದಾರೆ ಎಂದರೆ ಸರಿ.

ಸದರಿ ಪ್ರಕರಣದಲ್ಲಿ ನಾನು ವಕೀಲರನ್ನು ನೇಮಿಸಿಕೊಂಡಿದ್ದೆನೆ ಎಂದರೆ ಸರಿ. ಸದರಿ ಅಮಲ ಜಾರಿ ಪ್ರಕರಣದ ಬಗ್ಗೆ ಕೋರ್ಟನಿಂದ ಬಂದ ಎಲ್ಲ ದಾಖಲೆಗಳು ನನ್ನ ಬಳಿ ಇರುತ್ತವೆ. ಸದರಿ ಅಮಲ ಜಾರಿ ಪ್ರಕರಣದಲ್ಲಿ ನನ್ನ ಮೇಲೆ ವಾರೆಂಟ ಆಗಿತ್ತು ಎಂದರೆ ಸರಿ. ನಾನು ಹಾಜರು ಪಡಿಸಿದ ನಕ್ಷೆಯನ್ನು ಶ್ರೀ ಎಚ ಶ್ರೀಧರ ಎನ್ನುವ ಸರ್ವೆಯರ ತಯಾರಿಸಿರುತ್ತಾರೆ. ಸದರಿ ಸರ್ವೆಯರ ಎಚ ಶ್ರೀಧರ ಈಗ ಎಲ್ಲಿದ್ದಾರೆ ಎಂಬುದು ನನಗೆ ಗೊತ್ತಿಲ್ಲ. ದಾನ ಪತ್ರದಲ್ಲಿ ತಪ್ಪು ಬರೆದ ವಕೀಲರ ಆದ ಶ್ರೀ ವಿ ಎಮ ನಾಯ್ಕ ಅವರು ಮುರ್ಡೇಶ್ವರದಲ್ಲಿ ಇರುತ್ತಾರೇ. ದಾನ ಪತ್ರದ ತಯಾರಿಸಿದ ದಿನದಿಂದ ಈ ದಿನದವರೆಗೆ ದಾನ ಪತ್ರದಲ್ಲಿ ತಪ್ಪು ಬರೆದಿದ್ದಿರಿ ಎಂದು ಶ್ರೀ ವಿ ಎಮ ನಾಯಕರವರಿಗೆ ಯಾವುದೇ ನೋಟೀಸ ನೀಡಿರುವುದಿಲ್ಲ. ದಾನ ಪತ್ರವು ಕಾನೂನಿನಲ್ಲಿ ಅದಕ್ಕೆ ಯಾವುದೇ ಬೆಲೆ ಇರುವುದಿಲ್ಲ ಆ ಕಾರಣಕ್ಕಾಗಿ ಸಾಲವನ್ನು ಕಟ್ಟದೆ ಬಾಕಿ ಉಳಿಸಿಕೊಂಡಿದ್ದೇನೆ ಎಂದರೆ ಸರಿಯಲ್ಲ. ನಾನು ಹಾಜರು ಪಡಿಸಿದ ನಕ್ಷೆ ಮತುತ್ತ ದಾನ ಪತ್ರಕ್ಕೆ ಕಾನೂನಿನಲ್ಲಿ ಯಾವುದೇ ಬೆಲೆ ಇರುವುದಿಲ್ಲ ಎಂದರೆ ಸರಿಯಲ್ಲ. ವಾದಿಯವರಿಗೆ ಮೋಸ ಮಾಡುವ ಉದ್ದೇಶದಿಂದ ಸುಳ್ಳು ದಾನ ಪತ್ರ ಮತ್ತು ನಕ್ಷೆ ತಯಾರಿಸಲಾಗಿದೆ ಎಂದರೆ ಸರಿಯಲ್ಲ.

ಮರುವಿಚಾರಣೆ ಇಲ್ಲ.

**(ತೆ.ನ್ಯಾದಲ್ಲಿ ನನ್ನ ಉಕ್ತಲೇಖನದಂತೆ ಗಣಕೀಕೃತ ಮಾಡಿಸಲಾಯಿತು)**

**ಓ ಹೇ ಕೇ ಸರಿ ಇದೆ.**

**ಸಹಿ ಇದೆ.**

**ಹಿರಿಯ ಸಿವಿಲ್ ನ್ಯಾಯಾಧೀಶರು, ಭಟ್ಕಳ.**